ಅ) ಹಾಗಿದ್ದಲ್ಲಿ ಪುರಸಭೆಗಳ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಮತ್ತು ಹೈದ್ರಾಬಾದ್ ಕಾರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು) :

ಅ) ಇಲ್ಲಾ.

ಆ) ಪುರಸಭೆಗಳ ಆರ್ಥಿಕ ಪರಿಸ್ಥಿತಿಯನ್ನು ವಿಮರ್ಶಿಸಿ ಪರಿಸ್ಥಿತಿಯನ್ನು ಸುಧಾರಿಸುವ ಬಗ್ಗೆ ಸಲಹೆ ನೀಡಲು ಆರ್ಥಿಕ ಆಯೋಗವನ್ನು ರಚಿಸಿದೆ. ಆರ್ಥಿಕ ಆಯೋಗದ ವರದಿಯನ್ನು ಕಾಯಲಾಗಿದೆ.

ರೇಷ್ಮೆ ಬೆಲೆ ನಿಗಧಿಮಾಡುವಲ್ಲಿ ಸರ್ಕಾರದ ನಿಲುವು

135 - ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ರೇಷ್ಮೆ ಕೃಷಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೇಷ್ಮೆಗೆ ಕನಿಷ್ಟ ಬೆಲೆ ನಿಗಧಿ ಮಾಡುವ ವಿಷಯದಲ್ಲಿ ರಾಜ್ಯ ಸರ್ಕಾರದ ನಿಲುವೇನು?

ಆ) ಈ ವಿಷಯದ ಬಗ್ಗೆ ರೈತರ ಸಮಿತಿಯನ್ನು ರಚಿಸಲಾಗುವುದೆ?

ಶ್ರೀ ಡಿ. ನಾಗರಾಜಯ್ಯ (ರೇಷ್ಮೆ ರಾಜ್ಯ ಸಚಿವರು) :

ಅ) ಕಚ್ಚಾ ರೇಷ್ಮೆಗೆ ಕನಿಷ್ಟ ಬೆಲೆ ನಿಗಧಿಪಡಿಸುವ ವಿಷಯವು ಸರ್ಕಾರದ ನೀತಿಯಾಗಿದೆ.

ಆ) ಈ ವಿಷಯದಲ್ಲಿ ರೇಷ್ಮೆ ಬೆಳೆಗಾರರು, ರೇಷ್ಮೆ ನೇಕಾರರು ಹಾಗೂ ರೇಷ್ಮೆ ನೂಲು ಬಿಚ್ಚುವವರನ್ನೊಳಗೊಂಡ ಸಮಿತಿಯನ್ನು ರಚಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಕರಿಕಲ್ಲು ಸಾಗಿಸುವುದರಿಂದ ಪ್ರಕೃತಿಯ ಮೇಲಾದ ಪರಿಣಾಮ

136 - ಶ್ರೀ ಕೆ. ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಕೃತಿಯಲ್ಲಿ ಸಿಗುವ ಕರಿಕಲ್ಲುಗಳನ್ನು ವ್ಯಾಪಾರ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇದರಿಂದ ಪ್ರಕೃತಿಯ ಮೇಲೆ ಆಗುವ ಪರಿಣಾಮದ ಬಗ್ಗೆ ಸರ್ಕಾರಕ್ಕೆ ಗೊತ್ತಿದೆಯೇ?

ಇ) ಈ ವ್ಯಾಪಾರದಿಂದ ರಾಜ್ಯ ಸರ್ಕಾರಕ್ಕೆ ಎಷ್ಟು ಆದಾಯ ಬರುತ್ತದೆ? (ವಿವರಗಳನ್ನು ಒದಗಿಸುವುದು)

ಶ್ರೀ ಎಸ್.ಡಿ. ಜಯರಾಮ್ (ಗಣಿ ಮತ್ತು ಭೂವಿಜ್ಞಾನ ಸಚಿವರು) :

ಅ) ಹೌದು, ಬಂದಿದೆ.

ಆ) ಹೌದು.

ಇ) ರಾಜ್ಯದಲ್ಲಿ ಕರಿಕಲ್ಲು ವ್ಯಾಪಾರಕ್ಕೆ ಸಂಬಂಧಿಸಿದಂತೆ, ಗುತ್ತಿಗೆದಾರರಿಂದ 224.86 ಲಕ್ಷ ರಾಜಧನವು 1994-95ನೇ ಸಾಲಿಗೆ ಬಂದಿರುತ್ತದೆ.

ಎಂ.ಓ.ಯು.ಗೆ ಸಹಿ ಹಾಕಿರುವ ಬಗ್ಗೆ

137 - ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಎಷ್ಟು ಎಂ.ಓ.ಯು.ಗೆ ರಾಜ್ಯ ಸರ್ಕಾರದವರು ಸಹಿ ಹಾಕಿರುವರು

ಆ) ಸಹಿ ಹಾಕಿರುವುದರಿಂದ ರಾಜ್ಯದ ಎಷ್ಟು ಜನರಿಗೆ ಉದ್ಯೋಗ ಸಿಗುತ್ತದೆ ಮತ್ತು ರಾಜ್ಯದಲ್ಲಿನ ಎಷ್ಟು ಭೂಮಿಯನ್ನು ಎಂ.ಓ.ಯು.ಗೆ ನೀಡಲಾಗುತ್ತದೆ?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) :

ಅ) ರಾಜ್ಯ ಸರ್ಕಾರವು ಜನವರಿ 1995 ರಿಂದ 1 ಎಂಒಯು.ಗೆ ಸಹಿ ಹಾಕಿರುತ್ತದೆ. ಮತ್ತು ಕೆ.ಎಸ್.ಐ.ಐ.ಡಿ.ಸಿ.ಯು 13 ಎಂ.ಓ.ಯು. ಗಳಿಗೆ ಸಹಿ ಹಾಕಿರುತ್ತದೆ. ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಆ) ಸಂಬಂಧಿಸಿದ ಸಂಸ್ಥೆಗಳು ಯೋಜನಾ ಪ್ರಸ್ತಾವನೆಗಳನ್ನು ಸಲ್ಲಿಸಿದ ನಂತರವೇ ಈ ವಿವರಗಳು ತಿಳಿಯಬರುವುದು.

ಪ್ರತಿಹಳ್ಳಿಯಲ್ಲಿ ಸಣ್ಣ ಕೈಗಾರಿಕೆಗಳ ಸ್ಥಾಪನೆ.

138 - ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಪ್ರತಿ ಹಳ್ಳಿಗಳಿಗೆ ಪರಿಚಯಿಸಬಾರದೇಕೆ?

ಆ) ಕನಿಷ್ಟ ಕಬ್ಬು ಬೆಳೆಯುವ ಪ್ರದೇಶದಲ್ಲಿ ಒಂದೊಂದು ತಾಲ್ಲೂಕಿಗೆ ಹತ್ತು ಸಣ್ಣ ಕೈಗಾರಿಕೆಗಳನ್ನು ಮಾಡುವುದರ ಮೂಲಕ ಕಬ್ಬಿನ ಬೆಳೆಗಾರರ ಬವಣೆಯನ್ನು ಬಗೆಹರಿಸಬಹುದಲ್ಲವೆ.

ಇ) ಈ ಬಗ್ಗೆ ಸರ್ಕಾರದವರ ಧೋರಣೆ ಏನು (ವಿವರಗಳನ್ನೊದಗಿಸುವುದು)

ಶ್ರೀ ಎಸ್.ಎಂ. ನಬೀ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು) :

ಅ) ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಪ್ರತಿ ಹಳ್ಳಿಗಳಲ್ಲಿ ಪರಿಚಯಿಸಲಾಗಿದೆ. ಕೈಗಾರಿಕೆಗಳನ್ನು ಸ್ಥಾಪಿಸಲು ಮುಂದೆ ಬರುವ ಕೈಗಾರಿಕೋದ್ಯಮಿಗಳಿಗೆ ಸಹಾಯಧನ ಮತ್ತು ರಿಯಾಯಿತಿಗಳು ಸರ್ಕಾರವು ನೀಡುತ್ತಿದೆ.

ಆ) 'ಅ' ನಲ್ಲಿ ಉತ್ತರ ಕೊಟ್ಟಿರುವ ಹಿನ್ನೆಲೆಯಲ್ಲಿ ಉದ್ಭವಿಸುವುದಿಲ್ಲ.

ಇ) ಅದೇ.